ಹುಡುಗರಿಗೆ ಅವನ ಮಾತು ಪಥ್ಯ ಆಗಲಿಲ್ಲ. ನೀವು ಹ್ಞೂ ಅನ್ನಿ ಸಾಕು. ಉಳಿದದ್ದು ನಮಗೆ ಬಿಡಿ ಅಂತ ಪಟ್ಟು ಹಿಡಿದರು. ಬಾಬಣ್ಣ ಅರೆಮನಸ್ಸಿನಿಂದ ಒಪ್ಪಿದ.

'ಶನಿಮಹಾತ್ಮೆ ಪುರಾಣ ಕಥೆ. ಸಂಗೀತ ಜ್ಞಾನ ಇರೋರು ಡೈರೆಕ್ಷನ್ ಮಾಡಿದರೆ ಚೆನ್ನಾಗಿರುತ್ತೆ. ಇಡೀ ರಾತ್ರಿ ಹಾರ್ಮೋನಿಯಂ ತುಳಕಂಡು, ಕೂತಲ್ಲಿಂದ್ಲೇ ಪಾತ್ರಗಳು ಮರೆತ ಪದ, ಮಾತುಗಳನ್ನು ಎತ್ತಿಕೊಡುತ್ತ, ಸ್ಟೇಜು ಮ್ಯಾನೇಜು ಮಾಡೋಕೆ ರಾಮಣ್ಣ ಮೇಷ್ಟ್ರ ಕೈಲಿ ಆಗಲ್ಲ, ಅವರಿಗೂ ವಯಸ್ಸಾಯ್ತು. ಅವರಿಗೆ ಯಾರಾದರೂ ಗೊತ್ತಿರ್ತಾರೆ. ಅವರನ್ನು ಕರೆಸಿ ನಾಟಕ ಆಡಿಸಿ ಪುಣ್ಯ ಕಟ್ಟಿಕೊಳ್ಳಿ ಅಂತ ನೀವೇ ಹೋಗಿ ಮೇಷ್ಟ್ರನ್ನ ಕೇಳ್ರಿ...' ಅಂದ.

ಬೆಳಗಿನ ಒಂಬತ್ತರ ಹೊತ್ತಿಗೆ ಚಿಕ್ಕುಂಬೋವತ್ತಿನದು ಅಂತ ಎರಡು ಬಿಸಿ ಮುದ್ದೆ, ಸೊಪ್ಪಿನ ಸಾರು ಉಂಡು, ಮೇಲೊಂದು ಕೋಲಕ ಮಜ್ಜಿಗೆ ಕುಡಿದ ಮೇಲೆ ದಣಿವಾಯಿತು ಅಂತ ಮೇಷ್ಟ್ರು ಜಗುಲಿ ಮೇಲಿದ್ದ ಮಂಚದ ಮೇಲಿದ್ದ ಹಾಸಿಗೆ ಸುರುಳಿಗೆ ಒರಗಿ ಹಗಲೂಟದವರೆಗೆ ಸಣ್ಣ ನಿದ್ದೆ ಮಾಡಣ ಅಂತ ಅಂದುಕೊಳ್ಳುತ್ತಿರುವಾಗ ಊರ ಹುಡುಗರು ಬಂದದ್ದು ನೋಡಿ ಆಶ್ಚರ್ಯಗೊಂಡರು.

'ಮೇಷ್ಟ್ರೇ, ಶನಿದೇವರಿಗೆ ಊರ ಮೇಲೆ ಸಿಟ್ಟು

